# ನಾಲ್ಕನೆಯ  ಹೆಚ್ಚುವರಿ ಜಿಲ್ಲಾ ನ್ಯಾಯಾಲಯ , ವಿಜಯಪುರ, ಇವರ ನ್ಯಾಯಾಲಯ

**ಪಿ. ಮತ್ತು ಎಸ್.ಸಿ.. ನಂ. 24/2026**
**ಪಿ.ಡಬ್ಲ್ಯು-1**

**ಸಾಕ್ಷಿಯನ್ನು ಇಂದು ದಿಃ 07/07/2026 ರಂದು ಕರೆಯಿಸಿ**

**ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಪಿ.ಎಸ್.ಎಲ್  ವಕೀಲರಿಂದ ಅರ್ಜಿದಾರರ ಪರವಾಗಿ.**

ಈ ದಿನ ನನ್ನ ಮುಖ್ಯ ಪರೀಕ್ಷೆಯ ಸಲುವಾಗಿ ಪ್ರಮಾಣೀಕರಿಸಿದ ಪ್ರಮಾಣಪತ್ರವನ್ನು  ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ನನ್ನ ಹೇಳಿಕೆಯ ಪ್ರಕಾರ ಬರೆಯಲಾಗಿದ್ದು, ಅವುಗಳನ್ನು ಓದಿ ತಿಳಿದುಕೊಂಡು, ಅದಕ್ಕೆ ನನ್ನ ಸಹಿ ಮಾಡಿದ್ದೇನೆ.

ನಾನು ಈ ದಿನ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ನಿಪಿ-1  ನೋಂದಾಯಿತ ಮೂಲ  ಮೃತ್ಯು ಪತ್ರ

ನಿಪಿ-2  ಪಹಣಿ  ಪತ್ರಿಕೆ

ನಿಪಿ-3   ರಾಮಣ್ಣ ಜೆಟ್ಟೆಪ್ಪ  ಇವರ ಮರಣ ಪ್ರಮಾಣಪತ್ರ

ನಿಪಿ-4  ರಾಮಣ್ಣ ಜೆಟ್ಟೆಪ್ಪ  ಇತನ    ಆಧಾರ ಕಾರ್ಡ

ನಿಪಿ-5  ರೋಹನ ಇತನ ಜೆಟ್ಟೆಪ್ಪ  ಇವರ   ಆಧಾರ ಕಾರ್ಡ

ನಿಪಿ-6   ಸ್ಟೇಟಶನ (ದಿನಪತ್ರಿಕೆ)

**ಎದುರುದಾರರು ಯಾರು  ಇರುಲವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ,

4 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ

**<u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ,</u>**
**<u>ವಿಜಯಪುರ, ಇವರ ನ್ಯಾಯಾಲಯ</u>**

**ಪಿ. ಮತ್ತು ಎಸ್.ಸಿ.. ನಂ. 24/2026**
**ಪಿ.ಡಬ್ಲ್ಯು-2**

**<u>ಸಾಕ್ಷಿಯನ್ನು ಇಂದು ದಿಃ 07/07/2026 ರಂದು ಕರೆಯಿಸಿ</u>**

**<u>ಪ್ರಮಾಣವಚನ ಬೋಧಿಸಲಾಯಿತು</u>.**

**<u>ಮುಖ್ಯ ವಿಚಾರಣೆಃ ಶ್ರೀ. ಪಿ.ಎಸ್.ಎಲ್ ವಕೀಲರಿಂದ ಅರ್ಜಿದಾರರ ಪರವಾಗಿ</u>.**

ಈ ದಿನ ನನ್ನ ಮುಖ್ಯ ಪರೀಕ್ಷೆಯ ಸಲುವಾಗಿ ಪ್ರಮಾಣೀಕರಿಸಿದ ಪ್ರಮಾಣಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ನನ್ನ ಹೇಳಿಕೆಯ ಪ್ರಕಾರ ಬರೆಯಲಾಗಿದ್ದು, ಅವುಗಳನ್ನು ಓದಿ ತಿಳಿದುಕೊಂಡು, ಅದಕ್ಕೆ ನನ್ನ ಸಹಿ ಮಾಡಿದ್ದೇನೆ.

ಈಗ ನೋಡುತ್ತಿರುವ ಮೃತ್ಯುಪತ್ರವನ್ನು ರಾಮಪ್ಪ ಜೆಟ್ಟೆಪ್ಪ ಹರಿಜನ ಈತನು ತನ್ನ ಮೊಮ್ಮಗನಾದ ರೋಹನ ಇತನಿಗೆ ಶೆಡ್ಯೂಲ ಸ್ವತ್ತಿಗೆ ಸಂಬಂಧಿಸಿದಂತೆ ಬರೆದುಕೊಟ್ಟಿರುತ್ತಾನೆ. ಈಗ ನೋಡುತ್ತಿರುವ ನಿಪಿ-1 ರ ಮೇಲಿನ ಹೆಬ್ಬೆಟ್ಟಿನ ಗುರುತು ರಾಮಪ್ಪ ಇವರಿಗೆ ಸೇರಿದ್ದು ಇರುತ್ತದೆ.

ನಿಪಿ-1 ರ 'ಮೃತ್ಯುಪತ್ರ'ವನ್ನು ದಿಃ22-02-2017 ರಂದು ತಯಾರಿಸಿದ ನಂತರ ರಾಮಪ್ಪ ಇವರಿಗೆ ಓದಿ ಹೇಳಲಾಯಿತು. ಆ ನಂತರ ರಾಮಪ್ಪ ಇತನು ನಿಪಿ-1 ರ ಮೇಲಿರುವ ಈಗ ನೋಡುತ್ತಿರುವ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾನೆ. ಸದರಿ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾನೆ.

ರಾಮಪ್ಪ ಹೆಬ್ಬೆಟ್ಟಿನ ಗುರುತನ್ನು ಹಾಕಿದ ನಂತರ ನಾನು ಮತ್ತು ಭೀಮಶಂಕರ ಶರಣಪ್ಪ ಮಸಳಿ ಇಬ್ಬರೂ ನಿಪಿ-1 ರ ಮೃತ್ಯುಪತ್ರ ತಯಾರಿಸುವ ಕಾಲಕ್ಕೆ ಹಾಜರು ಇದ್ದು, ರಾಮಪ್ಪ ಇತನು ತನ್ನ ಹೆಬ್ಬೆಟ್ಟಿನ ಗುರುತನ್ನು ನಿಪಿ-1 ರ ಮೇಲೆ ಮಾಡುವಾಗ ಹಾಜರು ಇದ್ದು. ನಿಪಿ-1 ರ ಮೇಲೆ ನಮ್ಮ ಸಹಿಗಳನ್ನು ಮಾಡಿರುತ್ತೇವೆ. ನಿಪಿ-1 ರ ಮೇಲಿನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗ ನಿಪಿ-1(ಎ) ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ-1 ರ ಮೃತ್ಯುಪತ್ರದ ವಿಷಯಗಳು ತಿಳಿದಿರುತ್ತವೆ. ಇಬ್ಬರು ಸಾಕ್ಷಿಗಳು ಸಹಿ ಮಾಡಿದ ನಂತರ ಹಾದಿಮನಿಯವರು ನಿಪಿ-1 ರ ಮೇಲೆ ತಮ್ಮ ದಸ್ತೂರ ಮಾಡಿರುತ್ತಾರೆ.

**ಎದುರುದಾರರು ಯಾರು ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ,

4 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ